

## ಅಮ್ಮನ ಮಗಳು

ಕಳೆದ ವಾರ ಐಶ್ವರ್ಯ ರೈ ತನ್ನ ಮೂರೂವರೆ ತಿಂಗಳ ಮಗುವನ್ನು ಮನೆಯಲ್ಲಿ ಬಿಟ್ಟು ಲೋರಿಲ್– ಫೆಮಿನಾದ ಫ್ಯಾಶನ್ ಸಮಾರಂಭವೊಂದಕ್ಕೆ ಹೋಗಿದ್ದಳು. ಅದೇ ಬಳುಕುವ ದೇಹ; ಆದರೆ ಮುಖದಲ್ಲಿ ಸ್ವಲ್ಪ ಅಮ್ಮನ ಕಳೆ. ದೇಹತೂಕವೂ ಸ್ವಲ್ಪ ಹೆಚ್ಚಾಗಿದೆ. ಆ ಸಮಾರಂಭದಲ್ಲಿ ಐಶ್ವರ್ಯ ಹಲವು ಮಾಡೆಲ್‌ಗಳಿಗೆ ಬಹುಮಾನ ನೀಡಿದರು. ಜತೆಗೆ ಸಂಘಟಕರು ಐಶ್ವರ್ಯಳಿಗೆ 'ಐಕಾನಿಕ್ ವುಮನ್' ಎನ್ನುವ ಬಿರುದು ನೀಡಿ ಗೌರವಿಸಿದರು. 'ಐಶ್ವರ್ಯ ಒಬ್ಬ ಚುಂಬಕ ವ್ಯಕ್ತಿತ್ವವುಳ್ಳ ತಾಯಿ' ಎಂದು ಹೊಗಳಿದರು. ಅದಕ್ಕೆ ಉತ್ತರವಾಗಿ ಐಶ್ವರ್ಯ ಹೇಳಿದ್ದು– 'ನಾನು ನನ್ನ ಅಮ್ಮನ ಮಗಳು. ನಾನು ಹೇಗಿರಬೇಕು ಎನ್ನುವುದು ಪೂರ್ತಿಯಾಗಿ ರೂಪಿಸಿದ್ದು ನನ್ನ ತಾಯಿ. ನಾನು ಕುಸಿದಾಗ ಎತ್ತಿ ಹಿಡಿದವಳೂ ಆಕೆಯೇ. ನನ್ನ ವ್ಯಕ್ತಿತ್ವ ಇವತ್ತು ನಿಮಗೆ ಚುಂಬಕ ಅನ್ನಿಸಿದ್ದರೆ ಅದರ ಮುಖ್ಯ ಕಾರಣಕರ್ತೆ ನನ್ನ ಅಮ್ಮ. ಈ ಪ್ರಶಸ್ತಿ ಕೂಡಾ ಸೇರಬೇಕಾದದ್ದು ಅಮ್ಮನಿಗೇ..' ಸಂಘಟಕರು ಮತ್ತು ಸೇರಿದವರು ಐಶ್ ಭಾಷಣದಿಂದ ಭಾರೀ ಪ್ರಭಾವಿತರಾದರಂತೆ.



## ಜಾಣೆ ಪ್ರಿಯಾಂಕಾ

'ಕರೀನಾ ತುಂಬ ಸುಂದರಿ. ನಟಿಯಾಗಿ ಆಕೆಯನ್ನು ನಾನು ತುಂಬ ಗೌರವಿಸುತ್ತೇನೆ. ಆಕೆ ಒಬ್ಬ ಪರಿಪೂರ್ಣ ನಟಿ. ಪ್ರತಿಭಾವಂತೆ'– ಇದು ಸಮಾರಂಭವೊಂದರಲ್ಲಿ ಪ್ರಿಯಾಂಕಾ ಚೋಪ್ರಾ ಉವಾಚ!

ಇತ್ತೀಚಿನವರೆಗೂ ಕರೀನಾಳ ಬಗ್ಗೆ ಗುರ್ರ್ ಎನ್ನುತ್ತಿದ್ದ ಪ್ರಿಯಾಂಕಾ ಈಗ ದಿಢೀರನೆ ಇಷ್ಟೊಂದು ಉಲ್ಟಾ ಪ್ಲೇಟ್ ಹಾಕಿರೋದು ಯಾಕೆ? ಅದಕ್ಕೂ ಉತ್ತರವಿದೆ: ಪ್ರಿಯಾಂಕಾ ಅದೇ ಸಮಾರಂಭದಲ್ಲಿ ಮುಂದುವರಿದು ಮಾತನಾಡಿದ್ದನ್ನು ಓದಿ: 'ಸೈಫ್ ಅಲಿ ಖಾನ್ ಒಬ್ಬ ಅಪೂರ್ವ ನಟ. ಆತನ ಜತೆಗೆ ನಟಿಸಬೇಕು ಅಂತ ನನಗೆ ತುಂಬ ಆಸೆ ಇದೆ. 2–3 ವರ್ಷಗಳ ಹಿಂದೆ ನಾವಿಬ್ಬರೂ 2–3 ಚಿತ್ರಗಳಲ್ಲಿ ನಟಿಸಬೇಕಿತ್ತು. ಆದರೆ ಅದ್ಯಾಕೋ ಸಾಧ್ಯವಾಗಲಿಲ್ಲ. ನನ್ನ ಮತ್ತು ಅವನ ಡೇಟ್ಸ್ ಹೊಂದಾಣಿಕೆ ಆಗಲಿಲ್ಲ. ಈಗಲೂ ನಾನು ಸೈಫ್ ಜತೆ ಒಳ್ಳೆಯ ಚಿತ್ರವೊಂದರಲ್ಲಿ ನಟಿಸಲು ಕಾಯುತ್ತಿದ್ದೇನೆ..!'

ಪ್ರಿಯಾಂಕಾ ತುಂಬ ಜಾಣೆ ಅನ್ನುವುದು ಈಗ ಗೊತ್ತಾಯಿತೆ?



## ಗಂಡ– ಹೆಂಡತಿಯ ಕಥೆ

'ಕೆ ತ್ರೀ ಜಿ' ಎಂದರೆ ಕಭಿ ಖುಷಿ ಕಭಿ ಘಮ್. ಆ ಸಿನಿಮಾ ಬಂದು 11 ವರ್ಷಗಳಾದವು. ಅಮಿತಾಭ್ ಮತ್ತು ಜಯಾ ಬಚ್ಚನ್ ಆ ಚಿತ್ರದಲ್ಲಿ ಜತೆಯಾಗಿ ನಟಿಸಿದ್ದರು. ಅದಕ್ಕೂ ಎಷ್ಟೋ ವರ್ಷಗಳ ಮುನ್ನ 'ಸಿಲ್ ಸಿಲಾ' ಎನ್ನುವ ಚಿತ್ರದಲ್ಲಿ ಇಬ್ಬರೂ ಒಟ್ಟಿಗೆ ನಟಿಸಿದ್ದು ದೊಡ್ಡ ಸುದ್ದಿಯಾಗಿತ್ತು. ಇದೀಗ ಮತ್ತೆ ಈ ಗಂಡ–ಹೆಂಡತಿ ಜೋಡಿ ಇನ್ನೊಂದು ಚಿತ್ರದಲ್ಲಿ ತೆರೆಯ ಮೇಲೆ ಗಂಡ–ಹೆಂಡತಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದ ಹೆಸರು ಸದ್ಯಕ್ಕೆ ಗೊತ್ತಾಗಿಲ್ಲ. ಶೂಜಿ ಸಿರ್ಕಾರ್ ನಿರ್ಮಾಣದ ಈ ಚಿತ್ರದಲ್ಲಿ ಅಮಿತಾಭ್– ಜಯಾ 35 ವರ್ಷಗಳ ಕಾಲ ಒಟ್ಟಿಗೆ ಜೀವಿಸಿದ ಗಂಡ–ಹೆಂಡತಿ ಇಬ್ಬರೂ ಒಬ್ಬರ ಸಾವಿನ ಬಳಿಕ ಇನ್ನೊಬ್ಬರು ಹೇಗೆ ಒಬ್ಬಂಟಿಯಾಗಿ ಬದುಕಬಹುದು ಎನ್ನುವುದನ್ನು ಚರ್ಚಿಸುವ, ಪ್ಲಾನ್ ಮಾಡುವ ಕಥೆ ಇದೆಯಂತೆ! ಇಬ್ಬರೂ ಜತೆಗೆ ಇದ್ದಾಗ ಪರಸ್ಪರರನ್ನು ಗಾಢವಾಗಿ ಅವಲಂಬಿಸಿದ ಗಂಡ– ಹೆಂಡತಿ ಒಬ್ಬಂಟಿ ಜೀವನವನ್ನು ಸಹಿಸಿಕೊಳ್ಳುವುದು ಸಾಧ್ಯವೆ? ಮಾನಸಿಕವಾಗಿ ಉಂಟಾಗುವ ಘಾಸಿಯನ್ನು ಸಂಭಾಳಿಸುವುದು ಹೇಗೆ..? ಎನ್ನುವುದೇ ಮುಖ್ಯ ಕಥೆ. ಅಂದ ಹಾಗೆ, ಅಮಿತಾಭ್– ಜಯಾ ಇಬ್ಬರೂ ಮದುವೆಯಾಗಿ 35 ವರ್ಷಗಳಾದುವಂತೆ. ಹಾಗಾಗಿ ಇಬ್ಬರೂ ಈ ಸಿನಿಮಾದ ಬಗ್ಗೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾರಂತೆ.

■ ಬಿಂದು